# ಸಣ್ಣ ದನಿ ದೊಡ್ಡದಾದಾಗ...

ತುಸು ಹೆಚ್ಚೇ ಯೋಚಿಸುವ ಸಿನಿಮಾ ನಿರ್ದೇಶಕ ಅವರು. ಈಗ ನರೆತಕೂದಲಿನ ಫ್ರೆಂಚ್ ಗಡ್ಡದ ನಡುವಿನಿಂದ ಮುಗುಳ್ನಗೆ ತುಳುಕಿಸುತ್ತಾರೆ.

ಮೊದಲ ಸಿನಿಮಾದಿಂದಲೇ ಅವರದ್ದು ಲಯದ ಆಟ. ಕ್ರೀಡೆ ಎಂದರೂ ಮೆಚ್ಚು. ಅದಕ್ಕೇ ಅವರ ಮೊದಲ ಚಿತ್ರದ ವಸ್ತುವೂ ಅದೇ ಆಗಿತ್ತು. ನಟನ ಮಗನೊಬ್ಬ 'ಡೈನಮಿಕ್ ಪ್ರಿನ್ಸ್' ಎಂದು ಬಿರುದಾಂಕಿತನಾಗಲು ಪ್ರೇರಣೆ ನೀಡಿದ ಚಿತ್ರವದು.

ಮೊಗ್ಗಿನ ಮನಸುಗಳನ್ನು ಭಾವದ ಅಲೆ ಮೇಲೆ ತೇಲಿಬಿಟ್ಟು, ನಗು – ಅಳು ತರಿಸಿದವರು.

ಹಾಗೆ ನೋಡಿದರೆ ಅವರು ನಾಯಕಿಗೆ ಗೌರವ ಕೊಡುವವರ ಪೈಕಿ. ಪಾತ್ರಗಳನ್ನು ಬರೆಯುವಾಗ ಎಷ್ಟೋ ಚಿತ್ರಗಳಲ್ಲಿ ನಾಯಕಿಗೆ ಹೆಚ್ಚು ತೂಕ ದಕ್ಕಿಸಿಕೊಟ್ಟಿದ್ದಾರೆ. ಪ್ರೇಮಚಿತ್ರಗಳ ಹಳೆಯ ಸೂತ್ರ ಉಜ್ಜುವುದು ಅವರಿಗಿಷ್ಟವಿಲ್ಲ. ಓರಗೆಯ ನಿರ್ದೇಶಕರು ಹಸನಾದ ಸಿನಿಮಾ ಮಾಡಿದಾಗ ಅದನ್ನು ಮನಸಾರೆ ಮೆಚ್ಚಿಕೊಳ್ಳುವ ಔದಾರ್ಯ ಅವರದ್ದು.

ಕಡಿಮೆ ಬಜೆಟ್‌ನಲ್ಲಿ ಚಿತ್ರ ನಿರ್ದೇಶಿಸಿ ಕೊಟ್ಟು, ದೊಡ್ಡ ಸಿನಿಮಾಗಳ ಸ್ಪರ್ಧೆಯನ್ನೂ ಎದುರಿಸಿದವರು. ಆಗ ಸಾಧಾರಣ ಯಶಸ್ಸು ಸಿಕ್ಕಿದ್ದನ್ನು ಗಮನಿಸಿ, ಮತ್ತೆ ದೊಡ್ಡದಾಗಿ ಯೋಚಿಸತೊಡಗಿದರು. ಮೈದಾನಕ್ಕೆ ತಕ್ಕಂತೆ ಆಡಬೇಕು ಎನ್ನುವುದು ಫಿಲಾಸಫಿ.

ಕೃಷ್ಣ ಪರಮಾತ್ಮ ಅವರಿಗೆ ಇಷ್ಟವೋ ಏನೋ? ಅವರ ಕೆಲವು ಚಿತ್ರಗಳ ನಾಯಕನ ಹೆಸರು ಅದೇ. ಅದನ್ನು ಒಂದು ಪ್ರೇಮದ, ತಮ್ಮದೇ ಬ್ರ್ಯಾಂಡ್ ಆಗಿಸಿದ್ದೂ ಹೆಗ್ಗಳಿಕೆಯೇ ಸರಿ.

'ಲವ್ ಸ್ಟೋರಿ'ಗಳು ಬರೀ ಮಾಧುರ್ಯದ ಹಂಗಿಗೆ ಒಳಪಟ್ಟಿದ್ದ ಸಂದರ್ಭದಲ್ಲಿ ಹೆಣ್ಣುದನಿಯನ್ನು 'ಲೌಡ್' ಆಗಿ ಕೇಳಿಸಿದ್ದು ಅವರದೇ ದಾರಿ. ನಾಯಕನಟಿಯ ಹತಾಶೆ, ಬಡತನ ಒಡ್ಡುವ ಸಾಮಾಜಿಕ ಬಿಕ್ಕಟ್ಟುಗಳನ್ನು ಅವರು ದೃಶ್ಯದ ನವಿರುತನಕ್ಕೆ ಒಗ್ಗಿಸದೆ, ಮಾತಿನ ಮಂಟಪದಲ್ಲಿ ತಂದು ಕೂರಿಸಿದರು. 'ಜರಾಸಂಧ'ನನ್ನು ಆಧುನಿಕ ನಿಕಷಕ್ಕೆ ಒಡ್ಡಿ ನಿರ್ದೇಶಿಸಿದ ಚಿತ್ರ ಗೆಲ್ಲಲಿಲ್ಲ, ನಿಜ. ಆದರೆ, ಅದರ ಕಚ್ಚಾ ರೂಪಕಗಳು ಗಮನಸೆಳೆದವು. 'ಮುಂಗಾರು ಮಳೆ'ಯ ಯಶಸ್ಸನ್ನೇ ಬಂಡವಾಳ ಮಾಡಿಕೊಳ್ಳಲೆಂದು ಅವರು ಅದರ ಮುಂದುವರಿದ ಮಳೆ ಸುರಿಸಿದರು. ಅದೊಂದು ಟೂರಿಸಂ ಚಿತ್ರ. ಬೇಕಾದ ಬಜೆಟ್ ಕೂಡ ದೊಡ್ಡದಾಯಿತು. ಅಂದುಕೊಂಡಷ್ಟು ಚಿತ್ರ ಸದ್ದು ಮಾಡಲಿಲ್ಲವಾದರೂ, ಒಂದು ಹಾಡು ದೀರ್ಘ ಕಾಲ ಕೇಳುಗರ ಕಾಡಿತು.

ಸಣ್ಣ ಹೊಳಹು, 'ಓವರ್ ಥಿಂಕಿಂಗ್', ಲಂಬಿಸುವ ಧಾಟಿ ಇವೆಲ್ಲವುಗಳ ಹೊರತಾಗಿಯೂ ಚಿತ್ರರಂಗದಲ್ಲಿ ಒಂದು ದಶಕದಲ್ಲಿಯೇ ಅವರು ರುಜುವಾತು ಪಡಿಸಿರುವ ಸೂಕ್ಷ್ಮಗಳು ಹಲವು. ಚಂದಿರನ ಹೆಸರಿನ ಅವರಲ್ಲಿ ಇನ್ನಷ್ಟು ಕನಸುಗಳಂತೂ ಇವೆ.

● ವಿಶಾಖ ಎನ್.

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68